<u>ಅಸಲು ದಾವಾ ಸಂಖ್ಯೆ- **115/2023**</u> ಪಿ.ಡಬ್ಲ್ಯೂ:- **1**

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ದಿನಾಂಕಃ 24.03.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:- **6, 8** ಮತ್ತು **9** ನೇ ಪ್ರತಿವಾದಿ ಪರ ವಕೀಲರಿಂದ:-</u>

ನನ್ನ ತಂದೆಯ ಹೆಸರು ಹನುಮಂತಪ್ಪ ಮತ್ತು ತಾಯಿಯ ಹೆಸರು ಸಣ್ಣ ರಂಗಮ್ಮ. ನಮ್ಮ ತಂದೆಗೆ ನಾವು ಒಟ್ಟು 6 ಜನ ಮಕ್ಕಳು ಅಂದರೆ ಶೇಷಗಿರಿಯಪ್ಪ, ಹನುಮಂತಮ್ಮ, ಮುದ್ದಹನುಮಂತಪ್ಪ, ಗಂಗಮ್ಮ, ಸಿದ್ದಪ್ಪ, ಲೀಲಾವತಿ. ನಮ್ಮ ತಂದೆ ಈಗ್ಗೆ ಸುಮಾರು 35 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬದ ಎಲ್ಲಾ ವ್ಯವಹಾರಗಳನ್ನು ನನ್ನ ಅಣ್ಣ ಶೇಷಗಿರಿಯಪ್ಪ ನೋಡಿಕೊಳ್ಳುತ್ತಿದ್ದರು. ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ಕುಟುಂಬದ ಎಲ್ಲಾ ಆಸ್ತಿಗಳ ಖಾತೆಯು ನಮ್ಮ ತಾಯಿಯ ಹೆಸರಿಗೆ ಬಂದಿರುತ್ತದೆ ಮತ್ತು ನಮ್ಮ ತಾಯಿ ತೀರಿಕೊಂಡ ನಂತರ ನಮ್ಮ ಕುಟುಂಬದ ಆಸ್ತಿಯ ಖಾತೆ ನನ್ನ ಅಣ್ಣ ಶೇಷಗಿರಿಯಪ್ಪನ ಹೆಸರಿನಲ್ಲಿರುತ್ತವೆ. ನಮ್ಮ ತಂದೆ ತೀರಿಕೊಂಡ ನಂತರ ನನ್ನ, ನನ್ನ ತಾಯಿ ಮತ್ತು ನನ್ನ ಅಣ್ಣ ಮುದ್ದಹನುಮಂತಪ್ಪನ ಒಪ್ಪಿಗೆಯ ಮೇರೆಗೆ ಎಂ ಆರ್ ನಂ.41/1983-84 ರಂತೆ ದಾವಾ ಐಟಂ ನಂ.1 ರ ಆಸ್ತಿಯ ಖಾತೆ ಶೇಷಗಿರಿಯಪ್ಪನ ಹೆಸರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯನ್ನು ನಮ್ಮ ತಂದೆಯ ಜೀವಿತಕಾಲದಿಂದಲೂ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ದಾವಾ ಐಟಂ ನಂ.2 ರ ಆಸ್ತಿಯ ಹಕ್ಕುಪತ್ರವು ನನ್ನ ಅಣ್ಣ ಶೇಷಗಿರಿಯಪ್ಪ ಮರಣ ಹೊಂದಿದ್ದರಿಂದ ಒಟ್ಟು ಕುಟುಂಬದ ಪರವಾಗಿ ಅವರ ಹೆಂಡತಿಯಾದ 1 ನೇ ಪ್ರತಿವಾದಿಯ ಹೆಸರಿಗೆ ಸರ್ಕಾರದಿಂದ ನೀಡಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ಶೇಷಗಿರಿಯಪ್ಪನ ಜೀವಿತಕಾಲದಲ್ಲಿ ದಾವಾ ಐಟಂ ನಂ.2 ರ ಆಸ್ತಿಯನ್ನು ಮಂಜೂರು ಮಾಡಲು ನಿಡಿ-7 ರಂತೆ ಅರ್ಜಿಯನ್ನು 1998 ರಲ್ಲಿ ಸಲ್ಲಿಸಿದ್ದರು ಎಂದರೆ ಸರಿ. ನಿಡಿ-7 ರಲ್ಲಿ ನಮೂದಾಗಿರುವಂತೆ ದಾವಾ ಐಟಂ ನಂ.2 ರ ಆಸ್ತಿಯಲ್ಲಿ ನಮ್ಮ ಕುಟುಂಬದವರು

1998 ರ ಪೂರ್ವದ 15 ವರ್ಷಗಳಿಂದಲೂ ಸಾಗುವಳಿ ಮಾಡುತ್ತಿರುವ ಬಗ್ಗೆ ನಮೂದಾಗಿದೆ ಎಂದರೆ ಸರಿ. ನಮ್ಮ ಕುಟುಂಬದ ಎಲ್ಲಾ ಸದಸ್ಯರು 1998 ರ ಪೂರ್ವದ 15 ವರ್ಷಗಳಿಂದಲೂ ಇಲ್ಲಿಯವರೆಗೂ ದಾವಾ ಐಟಂ ನಂ.2 ರ ಆಸ್ತಿಯಲ್ಲಿ ಸಾಗುವಳಿ ಮಾಡುತ್ತಿದ್ದೇವೆ ಎಂದರೆ ಸರಿ. ದಾವಾ ಶೆಡ್ಯೂಲ್ ಆಸ್ತಿಗಳಲ್ಲಿ 7 ರಿಂದ 9 ನೇ ಪ್ರತಿವಾದಿಗಳಿಗೆ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.